# ಸೋನು ಹಳೆ ವಿಡಿಯೊದ ಶಾಶ್ವತ ಭಾವ

ಸೋನು ನಿಗಮ್ ನಾಲ್ಕು ವರ್ಷಗಳ ಹಿಂದೆ ಒಂದು ವಿಡಿಯೊ ರೆಕಾರ್ಡ್ ಮಾಡಿ, ಯೂಟ್ಯೂಬ್‌ನಲ್ಲಿ ಅಪ್‌ಲೋಡ್ ಮಾಡಿದ್ದರು. ಫುಟ್‌ಪಾತ್ ಮೇಲೆ ಮುದುಕನ ವೇಷದಲ್ಲಿ, ಹರಕಲು ಮಾಸಲು ಅಂಗಿ ಹಾಕಿಕೊಂಡು ಅವರು ಕುಳಿತಿದ್ದರು. ಜತೆಗೊಂದು ಹಾರ್ಮೋನಿಯಂ. 'ಡೋರ್ ಸೇ ಟೂಟೀ ಪತಂಗ್ ಜೈಸೆ ಕೀ ಯೇ ಜಿಂದ್‌ಗಾನಿ ಮೇರಿ ಆಜ್ ಹೂಂ ಕಲ್ ಹೋ ಮೇರಾ ನಾ ಹೋ... ಹರ್ ದಿನ್ ಕಿ ಹಕಾನಿ ಮೇರೆ...' ಎಂಬ ಸಾಲುಗಳನ್ನು ಗುನುಗಿ, ಸ್ವರ ಪ್ರಸ್ತಾರ ಹಾಕುತ್ತಾ ಹಾರ್ಮೋನಿಯಂ ಮೀಟಿದ್ದರು. ತರಕಾರಿ ಗಾಡಿಯವನು ನಿಂತಲ್ಲೇ ಅವಾಕ್ಕಾಗಿದ್ದ. ಯುವಕನೊಬ್ಬ 'ನಾನು ರೆಕಾರ್ಡ್ ಮಾಡಬಹುದೇ' ಎಂದು ಅನುಮತಿ ಕೇಳಿ, ಪಕ್ಕದಲ್ಲೇ ಕುಕ್ಕರಗಾಲಿನಲ್ಲಿ ಕುಳಿತಿದ್ದ. ಎರಡು ಹಾಡುಗಳ ಗುನುಗಿ ನಿಮಿಷಗಳಲ್ಲೇ ನೆರೆದವರಿಗೆ ಕೈಮುಗಿದ ವೇಷಧಾರಿ ಸೋನು, ಇನ್ನೇನು ಏಳಬೇಕು ಎನ್ನುವಷ್ಟರಲ್ಲಿ ಆ ಯುವಕ, 'ನಾಷ್ಟಾ ಮಾಡಿದ್ದೀರಾ ಅಂಕಲ್' ಎನ್ನುತ್ತಾ ಅವರ ಕೈಗೆ ಏನೋ ಕೊಟ್ಟಂಥ ದೃಶ್ಯ.

ಈ ವಿಡಿಯೊ ಹಳತಾಗಿಯೇ ಇಲ್ಲ. ಕೊರೊನಾ ಸೋಂಕು ಹರಡತೊಡಗಿದ ಮೇಲೆ ಮನೆಯಲ್ಲೇ ಕುಳಿತ ಜನ ಈ ವಿಡಿಯೊ ನೋಡಿ ಕಣ್ಣೀರು ಹಾಕಿದರು. ಶೇರ್ ಮಾಡತೊಡಗಿದರು. ಈಗಲೂ ಫೇಸ್‌ಬುಕ್‌ನಲ್ಲಿ ಒಬ್ಬರಲ್ಲ ಒಬ್ಬರು ಇದನ್ನು ಹಾಕಿ, ಭಾವುಕ ಸಂದೇಶವೊಂದನ್ನು ಬರೆಯುವುದನ್ನು ಕಾಣಬಹುದು. ಒಂದೂವರೆ ಕೋಟಿ ಜನ ಇದುವರೆಗೆ ಈ ವಿಡಿಯೊ ನೋಡಿದ್ದಾರೆ. ಅಷ್ಟೇ ಅಲ್ಲ, ನೋಡಿದವರಲ್ಲಿ ಕಾಮೆಂಟು ಮಾಡಿರುವ ಒಂದೂವರೆ ಸಾವಿರದಷ್ಟು ಜನರಲ್ಲಿ ಬಹುತೇಕರು ರೆಕಾರ್ಡ್ ಮಾಡಲು ಅನುಮತಿ ಕೇಳುವ, ತಿಂಡಿ ಆಯಿತೇ ಎಂದು ಕೈಗೆ ಏನೋ ಕೊಡುವ ಆ ಯುವಕನ ಕೊಂಡಾಡಿದ್ದಾರೆ.

ವಿಡಿಯೊದ ಉತ್ತರಾರ್ಧದಲ್ಲಿ ಸೋನು ತಮ್ಮ ವೇಷ ಕಳಚುತ್ತಾ ಮಾತನಾಡಿದ್ದಾರೆ. ಸುಮ್ಮನೆ ಮಾಡಿದ ಪ್ರಯೋಗ ಅದು ಎಂದಿರುವ ಅವರು, ಆ ಯುವಕ ಕೈಗೆ ಕೊಟ್ಟಿದ್ದನ್ನು ಫ್ರೇಮ್ ಹಾಕಿಸಿ ಇಟ್ಟುಕೊಂಡಿದ್ದಾರೆ. ಹತ್ತು ರೂಪಾಯಿಯ ಒಂದು ನೋಟು, ಒಂದೊಂದು ರೂಪಾಯಿಗಳ ಎರಡು ಕಾಯಿನ್‌ಗಳನ್ನು ಕೈಗಿತ್ತು, ತಿಂಡಿ ತಿನ್ನುವಂತೆ ಕೋರಿದ ಆ ಯುವಕನಿಗೆ ರಿಟರ್ನ್ ಗಿಫ್ಟ್ ಕೊಡಬೇಕೆನ್ನುವ ಬಯಕೆಯನ್ನೂ ಸೋನು ಈಡೇರಿಸಿದರು. ಶಹಬಾಸ್ ಎಂಬ ಆ ಯುವಕನನ್ನು ಮನೆಗೆ ಕರೆಸಿಕೊಂಡು, ಆಲಿಂಗನದ ಬೆಚ್ಚಗಿನ ಅನುಭವವಿತ್ತರು.

ಇದೊಂದು ಆಸಕ್ತಿಕರ 'ಸೋಷಿಯಲ್ ಎಕ್ಸ್‌ಪೆರಿಮೆಂಟ್' ಅಂತೂ ಹೌದು. ■





# ಈಗಲೂ 'ಬುಟ್ಟ ಬೊಮ್ಮ' ಸದ್ದು

ಈ ವರ್ಷ ಕೋವಿಡ್ ಕಾರ್ಮೋಡ. ಅದರ ನಡುವೆಯೂ ಸಂಗೀತಾಭಿಮಾನಿಗಳಿಗೆ, ಅದರಲ್ಲೂ ಚಿತ್ರ ಸಂಗೀತಾಭಿಮಾನಿಗಳಿಗೆ ಹಾಡಿಕೊಳ್ಳಲು ಒಂದಿಷ್ಟು ಚಿತ್ರಗೀತೆಗಳೇನೋ ಸಿಕ್ಕವು. ಯೂಟ್ಯೂಬ್ ಹಾಗೆ ವರ್ಷವಿಡೀ ಹೆಚ್ಚು ಕೇಳಿರುವ ಟಾಪ್ 20 ಹಾಡುಗಳ ಪಟ್ಟಿ ಹಾಕಿದೆ. ಅದರಲ್ಲಿ ದಕ್ಷಿಣ ಭಾರತದ ಎರಡೇ ಹಾಡುಗಳು ಇರುವುದು. ಎರಡೂ ತೆಲುಗಿನವೇ. 'ಅಲಾ ವೈಕುಂಠಪುರಮುಲೋ' ಸಿನಿಮಾದ 'ಬುಟ್ಟ ಬೊಮ್ಮ', 'ರಾಮುಲೋ ರಾಮುಲಾ' ಆ ಗೀತೆಗಳು. 'ಬುಟ್ಟ ಬೊಮ್ಮ' ಹಾಡನ್ನು 47 ಕೋಟಿ ಜನ ನೋಡಿದ್ದಾರೆ. 'ರಾಮುಲೋ...' 26 ಕೋಟಿ ವೀಕ್ಷಕರ ಸೆಳೆದಿದೆ. ತ್ರಿವಿಕ್ರಮ ನಿರ್ದೇಶನದ 'ಅಲೋ ವೈಕುಂಠಪುರಮುಲೋ' ಸಿನಿಮಾದಲ್ಲಿ ಅಲ್ಲು ಅರ್ಜುನ್ ಹಾಗೂ ಪೂಜಾ ಹೆಗಡೆ ಜೋಡಿ ಮೋಡಿ ಮಾಡಿತ್ತು. 'ಬುಟ್ಟ ಬೊಮ್ಮ' ಹಾಡಿಗೆ ಅಲ್ಲು ಮಾಡಿದ್ದ ನೃತ್ಯವನ್ನು ಅನುಕರಿಸಿದವರಿಗೂ ಲೆಕ್ಕವಿಲ್ಲ. ಈ ಹಾಡಿನ ಡಿಜೆ ಮಿಕ್ಸ್‌ಗಳು, ನೃತ್ಯಾವತರಣಿಕೆಯ ಅಸಂಖ್ಯ ವಿಡಿಯೊಗಳು ಕೂಡ ಲಗ್ಗೆಇಟ್ಟಿವೆ.

ಪೂಜಾ ಹೆಗಡೆ ಈ ಖುಷಿಯನ್ನು ತಮ್ಮ ಇನ್‌ಸ್ಟಾಗ್ರಾಂನಲ್ಲಿ ಹಂಚಿಕೊಂಡಿದ್ದಾರೆ. ಇಡೀ ದೇಶದಲ್ಲೇ ಟಾಪ್ 20 ಹಾಡುಗಳಲ್ಲಿ ದಕ್ಷಿಣ ಭಾರತದ ಎರಡೇ ಎರಡು. ಅವೆರಡೂ ತಮ್ಮ ನಟನೆಯ ಚಿತ್ರದ್ದೇ ಆಗಿರುವರಿಂದ ಆಕಾಶಕ್ಕೆ ಅವರಿಗೀಗ ಮೂರೇ ಗೇಣು.

■ ವಿಶಾಖ ಎನ್.